



**ಚಟುವಟಿಕೆ 1: ಮನೆಯಲ್ಲಿ ಸಿಗುವ  ವಸ್ತುಗಳಿಂದ ಪ್ರಾಣಿಯನ್ನು ರಚಿಸುವುದು**

**ವಯಸ್ಸು:** ಮಕ್ಕಳು, ಮತ್ತು ಯುವಕರು ಹಾಗು ವಯಸ್ಕರು ಈ ಚಟುವಟಿಕೆಯನ್ನು ಪ್ರಯತ್ನಿಸಬಹುದು.

**ಅಗತ್ಯ ವಸ್ತುಗಳು:** ಬಂಡೆಗಳು, ಬೆಣಚುಕಲ್ಲುಗಳು, ಎಲೆಗಳು, ಮಣ್ಣು, ಹಗ್ಗಗಳು, ಎಲೆಗಳು, ಹೂವುಗಳು, ಮರಳು, ಬೀಜಗಳು, ದ್ವಿದಳ ಧಾನ್ಯಗಳು, ಹಣ್ಣಿನ ಸಿಪ್ಪೆಗಳು, ತ್ಯಾಜ್ಯ ತರಕಾರಿಗಳು ಇತ್ಯಾದಿ.

**ಹಂತಗಳು:**

1. ನಿಮಗೆ ತಿಳಿದಿರುವ ಹಾಗೂ ಪಠ್ಯಪುಸ್ತಕ, ಟಿವಿ ಇತ್ಯಾದಿಗಳಲ್ಲಿ ನೋಡಿರುವ ಅಥವಾ ಸಾಕು ಪ್ರಾಣಿಗಳಂತೆ ಮನೆಯಲ್ಲಿರುವ ವಿವಿಧ ರೀತಿಯ ಪ್ರಾಣಿಗಳ ಬಗ್ಗೆ ಯೋಚಿಸಿ.
2. ನಿಮ್ಮ ಮನೆಯಲ್ಲಿ ಯಾವುದಾದರೂ ಪ್ರಾಣಿಯಿದ್ದರೆ ಅಥವಾ ಫೋಟೋಗಳನ್ನು ನೋಡುವ ಮೂಲಕ ಪ್ರಾಣಿಗಳನ್ನು ಹತ್ತಿರದಿಂದ ಗಮನಿಸಿ ಮತ್ತು ಪ್ರತಿಯೊಂದರಲ್ಲೂ ವಿಭಿನ್ನ ವಿವರಗಳನ್ನು ಗಮನಿಸಿ.
3. ನೀವು ಯಾವ ರೀತಿಯ ಆಕಾರಗಳನ್ನು ನೋಡಬಹುದು? ಇವೆಲ್ಲವೂ ಒಂದೇ ಗಾತ್ರದಲ್ಲಿವೆಯೇ? ಪ್ರಾಣಿಗಳ ಮೇಲಿನ ಗುರುತುಗಳು, ವಿನ್ಯಾಸಗಳು ಮತ್ತು ಮಾದರಿಗಳು ಯಾವುವು?
4. ನಂತರ ಒಂದು ಪ್ರಾಣಿಯನ್ನು ಆರಿಸಿ ಮತ್ತು ಮನೆಯಲ್ಲಿ ಸಿಕ್ಕಸಿಗುವ ವಸ್ತುಗಳನ್ನು ಬಳಸಿ ಪ್ರಾಣಿಗಳನ್ನು ರಚಿಸಿ. ದೊಡ್ಡ ಆಕಾರಗಳು ಅಥವಾ ಹೊರರೇಖೆಯೊಂದಿಗೆ ಪ್ರಾರಂಭಿಸಿ ಮತ್ತು ನಂತರ ಉತ್ತಮವಾದ ವಿವರಗಳನ್ನು ಸೇರಿಸಿ.

5. ನಿಮ್ಮ ಕಲಾಕೃತಿಗಳನ್ನು ನಿಮ್ಮ ಕುಟುಂಬ ಮತ್ತು ಸ್ನೇಹಿತರೊಂದಿಗೆ ಹಂಚಿಕೊಳ್ಳಿ. ಚಟುವಟಿಕೆಯನ್ನು ಮಾಡುವಾಗ ನೀವು ಯಾವ ಪ್ರಾಣಿಯನ್ನು ಆರಿಸಿದ್ದೀರಿ ಮತ್ತು ನಿಮಗೆ ಯಾವುದು ಆಸಕ್ತಿದಾಯಕವಾಗಿದೆ ಎಂದು ಅವರೊಂದಿಗೆ ಹಂಚಿಕೊಳ್ಳಿ.

*ನಮ್ಮ ಚಟುವಟಿಕೆಗಳು ನಿಮಗೆ ಆಕರ್ಷಕ ಮತ್ತು ಆಸಕ್ತಿದಾಯಕ ಎಂದು ನಿಮಗೆ ಅನಿಸಿದರೆ ನಿಮ್ಮ ಅನುಭವಗಳನ್ನು ಫೇಸ್ ಬುಕ್ ಮತ್ತು ಇಸ್ಟಾಗ್ರಾಮ್ ನಲ್ಲಿ ಹಂಚಿಕೊಳ್ಳಬಹುದು @artsparksfoundation ಎಂದು ಟ್ಯಾಗ್ ಮಾಡಿ. ನಮ್ಮ ಇತರೆ ಚಟುವಟಿಕೆಗಳ ಮಾಹಿತಿಗಳಿಗಾಗಿ ನೀವು ನಮ್ಮನ್ನು ಅನುಸರಿಸಬಹುದು..*

*ನೀವು ಮಾಡಿದ ಚಟುವಟಿಕೆಯ ಕಲಾಕೃತಿಗಳ ಚಿತ್ರಗಳು ಮತ್ತು ಅನುಭವಗಳನ್ನು ನೀವು mtombing.artsparks@gmail.com ಗೆ ಕಳುಹಿಸಬಹುದು.*

*ArtSparks Foundation*

ART SPARKS
CURIOSITY. CREATIVITY. LEARNING.

*www.art-sparks.org*